**ಸಾಕ್ಷಿಯನ್ನು ದಿನಾಂಕ: 19-07-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು :- 5 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು 1983 ನೇ ಇಸವಿಯ ಕರ್ನಾಟಕ ರಾಜ್ಯ ವಿಧಾನ ಸಭೆ ಮತದಾರರ ಪಟ್ಟಿಯನ್ನು ನೋಡಿ ಅದರಲ್ಲಿ ನನ್ನ ಹೆಸರು ಇರುವುದನ್ನು ತಿಳಿದುಕೊಂಡು ನಾನು ಅದರಲ್ಲಿ ನಮೂದಿಸಿದ ವಿಳಾಸದಲ್ಲಿ ಇದ್ದೆ ಎಂದು ಒಪ್ಪಿಕೊಂಡ ಮೇರೆಗೆ ಅದನ್ನು **ನಿಡಿ-14 ಎಂದು ಗುರುತಿಸಲಾಯಿತು**. ನಾನು ಈಗ ನೋಂದಾಯಿತ ಕ್ರಯಪತ್ರ ದಿನಾಂಕಃ 01-09-2005 ರ ದೃಢೀಕೃತ ನಕಲನ್ನು ನೋಡುತ್ತಿದ್ದು, ಅದನ್ನು ಚಿಕ್ಕಪ್ಪಯ್ಯ ಮತ್ತು ಇತರರು ಅರವಿಂದನ್ ರವರಿಗೆ ನಮ್ಮ ಒಟ್ಟು ಕುಟುಂಬದ ಸ್ವತ್ತಿನ ಬಗ್ಗೆ ಮಾಡಿಕೊಟ್ಟ ಕ್ರಯಪತ್ರ ಎಂದು ಒಪ್ಪಿಕೊಂಡು ಅದನ್ನು ಅಭಿಮುಖವಾಗಿ **ನಿಡಿ-15 ಎಂದು ಗುರುತಿಸಲಾಯಿತು**. ನಮ್ಮ ಒಟ್ಟು ಕುಟುಂಬದ ಸ್ವತ್ತುಗಳು 1993 ರಲ್ಲಿ ಆಗಲೇ ವಿಭಾಗ ಆಗಿದ್ದವು ಎಂದರೆ ಸರಿ. ಸದರಿ ವಿಭಾಗದಂತೆ 4 ನೇ ಪ್ರತಿವಾದಿ ಅವರ ಹಿಸ್ಸೆಗೆ ಬಂದ ಜಾಗದಲ್ಲಿ ಕಟ್ಟಿದ ಮನೆಯ 3 ಛಾಯಾ ಚಿತ್ರಗಳನ್ನು ನೋಡುತ್ತಿದ್ದು, ಅವುಗಳನ್ನು ಒಪ್ಪಿಕೊಂಡಿದ್ದರಿಂದ ಅವುಗಳನ್ನು ಅಭಿಮುಖವಾಗಿ **ನಿಡಿ-16 ರಿಂದ 18 ಎಂದು ಗುರುತಿಸಲಾಯಿತು**. ಸದರಿ ಮನೆಯನ್ನು ಸರ್ವೆ ನಂ.182/3 ರಲ್ಲಿ ನಿರ್ಮಿಸಿರುತ್ತಾರೆ. ನಾನು ಈಗ ಒಂದು ಆಸ್ತಿಗಳ ವಿವರದ ಪಟ್ಟಿಯನ್ನು ನೋಡುತ್ತಿದ್ದು, ಅದನ್ನು ಕುಲಂಕುಶವಾಗಿ ಪರಿಶೀಲಿಸಿ ಸದರಿ ಪಟ್ಟಿ 1993 ರ ಮೌಖಿಕ ವಿಭಾಗದ ಪ್ರಕಾರ ಕುಟುಂಬದ ಸದಸ್ಯರ ಹಿಸ್ಸೆಗೆ ಬಂದಿರುವ ಆಸ್ತಿಗಳ ವಿವರ ಎಂದು ಒಪ್ಪಿಕೊಂಡು ಸದರಿ ಪಟ್ಟಿಯನ್ನು **ನಿಡಿ-19 ಎಂದು ಗುರುತಿಸಲಾಯಿತು**. ನಾನು ಈಗ ಎರಡು ಛಾಯಾ ಚಿತ್ರಗಳನ್ನು ನೋಡುತ್ತಿದ್ದು, ಸದರಿ ಛಾಯಾ ಚಿತ್ರಗಳು 1993 ರ ವಿಭಾಗದ ಪ್ರಕಾರ 3 ನೇ ಪ್ರತಿವಾದಿಗೆ ಬಂದ ಹಿಸ್ಸೆಯಲ್ಲಿ ಅವರು ನಿರ್ಮಿಸಿಕೊಂಡ ಮನೆ ಎಂದು ಒಪ್ಪಿಕೊಂಡಿದ್ದರಿಂದ ಅವುಗಳನ್ನು **ನಿಡಿ-20 ಮತ್ತು 21 ಎಂದು ಗುರುತಿಸಲಾಯಿತು**. ನಾನು ಈಗ 3 ಛಾಯಾ ಚಿತ್ರಗಳನ್ನು ನೋಡುತ್ತಿದ್ದು, ಅದರಲ್ಲಿ ತೆಂಗಿನ ಮರಗಳು ಕಂಡು ಬರುವ ಜಮೀನು 4 ನೇ ಪ್ರತಿವಾದಿಗೆ 1993 ರ ವಿಭಾಗದಂತೆ ಬಂದಿರುವ ಆಸ್ತಿ ಎಂದು ಒಪ್ಪಿಕೊಂಡು ಹಾಗೂ ಸದರಿ ಜಮೀನು ಸರ್ವೆ ನಂ.182/3 ರಲ್ಲಿ ಬರುತ್ತದೆ ಎಂದು ಹೇಳಿ ಸದರಿ ಛಾಯಾ ಚಿತ್ರಗಳನ್ನು **ನಿಡಿ-22 ರಿಂದ 24 ಎಂದು ಗುರುತಿಸಲಾಯಿತು**. ನಾನು ಈಗ 5 ಛಾಯಾ ಚಿತ್ರಗಳನ್ನು ನೋಡುತ್ತಿದ್ದು, ಸದರಿ ಛಾಯಾ ಚಿತ್ರಗಳು ವಿಭಾಗದಲ್ಲಿ ನನ್ನ ಹಿಸ್ಸೆಗೆ ಬಂದ ಜಮೀನಿನಲ್ಲಿ ನಾನು ನಿರ್ಮಿಸಿದ ಮನೆ, ಗುಲಾಬಿ ತೋಟಕ್ಕೆ ಸಂಬಂಧಿಸಿದ್ದು ಎಂದು ಒಪ್ಪಿಕೊಂಡು ಸದರಿ ಛಾಯಾ ಚಿತ್ರಗಳನ್ನು **ನಿಡಿ-25 ರಿಂದ 29 ಎಂದು ಗುರುತಿಸಲಾಯಿತು**. 5 ನೇ ಪ್ರತಿವಾದಿಯ

ಹಿಸ್ಸೆಗೆ ಬಂದ ಜಮೀನಿನಲ್ಲಿ ನಮ್ಮ ತಂದೆ-ತಾಯಿಗೆ ಸ್ಮಶಾನದ ಸ್ಮಾರಕಗಳು ಇದ್ದು, ಸದರಿ ಛಾಯಾ ಚಿತ್ರಗಳನ್ನು **ನಿಡಿ-30 ಮತ್ತು 31 ಎಂದು ಗುರುತಿಸಲಾಯಿತು**. ನಮ್ಮ ತಂದೆ-ತಾಯಿ ಮರಣ ಹೊಂದಿದಾಗ ಅವರ ಅಂತಿಮ ಕ್ರಿಯೆಗಳನ್ನು ನಾವೆಲ್ಲರೂ ಒಟ್ಟಿಗೆ ಮಾಡಿರುತ್ತೇವೆ. ನಾನು ಈಗ 3 ಛಾಯಾ ಚಿತ್ರಗಳನ್ನು ನೋಡುತ್ತಿದ್ದು, ಅದರಲ್ಲಿರುವ ರಸ್ತೆ ಸರ್ವೆ ನಂ.182/3 ಮತ್ತು 180/2 ಎ ರ ಮಧ್ಯದಲ್ಲಿ ಹಾದುಹೋಗುತ್ತದೆ ಎಂದು ಒಪ್ಪಿಕೊಂಡ ಮೇರೆಗೆ ಕ್ರಮವಾಗಿ **ನಿಡಿ-32 ರಿಂದ 34 ಎಂದು ಗುರುತಿಸಲಾಯಿತು**. ನಾನು ಈಗ 2 ಛಾಯಾ ಚಿತ್ರಗಳನ್ನು ನೋಡುತ್ತಿದ್ದು, ಸದರಿ ಛಾಯಾ ಚಿತ್ರಗಳು 4 ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಸರ್ವೆ ನಂ.185 ರಲ್ಲಿ 1 ಎಕರೆ 12 ಗುಂಟೆಯಲ್ಲಿ ಅವರ ದಾಳಿಂಬೆ ತೋಟಕ್ಕೆ ಸಂಬಂಧಿಸಿದೆ ಎಂದು ಒಪ್ಪಿಕೊಂಡ ಮೇರೆಗೆ ಅವುಗಳನ್ನು ಕ್ರಮವಾಗಿ **ನಿಡಿ-35 ಮತ್ತು 36 ಎಂದು ಗುರುತಿಸಲಾಯಿತು**. ನಾನು ಈಗ 2 ಛಾಯಾ ಚಿತ್ರಗಳನ್ನು ನೋಡುತ್ತಿದ್ದು, ಅವುಗಳಲ್ಲಿ ಉಳುಮೆ ಮಾಡಿರುವ ಜಮೀನನ್ನು ಮೌಖಿಕ ವಿಭಾಗದಂತೆ 3 ನೇ ಪ್ರತಿವಾದಿ ಹಿಸ್ಸೆಗೆ ಬಂದಿದ್ದು, ಅದನ್ನು ಈಗ 8 ನೇ ಪ್ರತಿವಾದಿ ಉಳುಮೆ ಮಾಡುತ್ತಿದ್ದಾರೆ ಮತ್ತು ಅದರಲ್ಲಿ ಕಂಡು ಬರುವ ನೀಲಗಿರಿ ತೋಪಿನ ಜಾಗ 4 ನೇ ಪ್ರತಿವಾದಿಯ ಹಿಸ್ಸೆಗೆ ಬಂದಿರುವ ಸರ್ವೆ ನಂ.9 ಎಂದು ಒಪ್ಪಿಕೊಂಡ ಮೇರೆಗೆ ಕ್ರಮವಾಗಿ **ನಿಡಿ-37 ಮತ್ತು 38 ಎಂದು ಗುರುತಿಸಲಾಯಿತು**. ನಾನು ಈಗ 2 ಛಾಯಾ ಚಿತ್ರಗಳನ್ನು ನೋಡುತ್ತಿದ್ದು, ಅದರಲ್ಲಿರುವ ಜಮೀನು ಮತ್ತು ಬಾವಿ ವಿಭಾಗದಲ್ಲಿ 3 ನೇ ಪ್ರತಿವಾದಿ ಹೆಸರಿಗೆ ಹೋಗಿರುತ್ತದೆ ಎಂದು ಒಪ್ಪಿಕೊಂಡ ಮೇರೆಗೆ ಕ್ರಮವಾಗಿ **ನಿಡಿ-39 ಮತ್ತು 40 ಎಂದು ಗುರುತಿಸಲಾಯಿತು**. ನಾನು ಒಂದು ಪ್ರಮಾಣ ಪತ್ರ ಮತ್ತು ವಿದ್ಯುತ್ ಬಿಲ್ ನೋಡುತ್ತಿದ್ದು, ಸದರಿ ದಾಖಲೆ ನನ್ನ ಮನೆಗೆ ನಾನು ವಿದ್ಯುತ್ ಸಂಪರ್ಕ ಪಡೆದ ಬಗ್ಗೆ ನೀಡಿರುವ ದಾಖಲೆ ಎಂದು ಒಪ್ಪಿಕೊಂಡ ಮೇರೆಗೆ ಅದನ್ನು ಒಟ್ಟಾಗಿ **ನಿಡಿ-41 ಎಂದು ಗುರುತಿಸಲಾಯಿತು**. ನಾನು ಮತ್ತು ನನ್ನ ಸಹೋದರರು 1993 ರವರೆಗೆ ಒಟ್ಟಿಗೆ ವಾಸವಿದ್ದು, ಅದರ ನಂತರ ವಿಭಾಗ ಮಾಡಿಕೊಂಡು ಬೇರೆ ಬೇರೆ ವಾಸವಿದ್ದೇವೆ. ನಾನು 2018 ನೇ ಇಸವಿಯ ಕರ್ನಾಟಕ ರಾಜ್ಯ ವಿಧಾನ ಸಭೆ ಮತದಾರರ ಪಟ್ಟಿಯನ್ನು ನೋಡಿ ಅದರಲ್ಲಿ ನನ್ನ ಹೆಸರು ಇರುವುದನ್ನು ತಿಳಿದುಕೊಂಡು ನಾನು ಅದರಲ್ಲಿ ನಮೂದಿಸಿದ ವಿಳಾಸದಲ್ಲಿ ಇದ್ದೇನೆ ಎಂದು ಒಪ್ಪಿಕೊಂಡ ಮೇರೆಗೆ ಅದನ್ನು **ನಿಡಿ-42 ಎಂದು ಗುರುತಿಸಲಾಯಿತು**. ನಾನು ನನ್ನ ಹಿಸ್ಸಗೆ ಬಂದ ಜಮೀನಿನಲ್ಲಿ 1993 ರಿಂದ ಉಳುಮೆ ಮಾಡಿಕೊಂಡು ಸ್ವಾಧೀನ ಇದ್ದೇನೆ. 1993 ರ ವಿಭಾಗ ನೋಂದಣಿ ಆಗದ ಕಾರಣ ಕಂದಾಯ ದಾಖಲೆಗಳು ಬದಲಾವಣೆ ಆಗಿರುವುದಿಲ್ಲ, ಆದ್ದರಿಂದ ಈ ದಾವೆ ದಾಖಲಿಸಿರುತ್ತೇನೆ. ನಾನು

ತಾರಹುಣಸೆ ಹಾಲು ಉತ್ಪಾದಕರ ಸಂಘದ ಸದಸ್ಯ ಎಂದರೆ ಸರಿ. ನಮ್ಮ ತಂದೆ ನಮ್ಮ ಕುಟುಂಬದ ಎಲ್ಲಾ ಸದಸ್ಯರಿಗೆ 1993 ರ ವಿಭಾಗದಲ್ಲಿ ಹಸುಗಳನ್ನು ನೀಡಿದ್ದು, ಅದರಂತೆ ನಾವು ಉತ್ಪಾದಿಸಿದ ಹಾಲನ್ನು ಸದರಿ ಸಂಘಕ್ಕೆ ನೀಡುತ್ತಿದ್ದೇವೆ. ನನಗೆ ಸದರಿ ಸಂಘದಿಂದ ಷೇರು ಪ್ರಮಾಣ ಪತ್ರವನ್ನು ಜಾರಿ ಮಾಡಿರುತ್ತಾರೆ, ಅದನ್ನು ಹಾಜರು ಮಾಡಬಹುದು. ಅದೇ ರೀತಿ 2 ರಿಂದ 5 ಮತ್ತು 8 ನೇ ಪ್ರತಿವಾದಿಗಳಿಗೂ ಸಹ ಷೇರು ಪ್ರಮಾಣ ಪತ್ರವನ್ನು ನೀಡಿರುತ್ತಾರೆ. 1 ನೇ ಪ್ರತಿವಾದಿ 1993 ರಿಂದ ಅವರ ಕೊನೆಯ ಕಾಲದವರೆಗೂ 5 ನೇ ಪ್ರತಿವಾದಿ ಜೊತೆಯಲ್ಲಿ ವಾಸವಿದ್ದರು ಎಂದರೆ ಸರಿ. 2017 ರಲ್ಲಿ 8 ಮತ್ತು 10 ನೇ ಪ್ರತಿವಾದಿಗಳು ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಿದ ಬಗ್ಗೆ ನಾನು ದಿನಾಂಕಃ 07-11-2017 ರಂದು ದೂರನ್ನು ಸಲ್ಲಿಸಿದ್ದು, ಸದರಿ ದೂರು, ಪೋಲಿಸ್ ಸ್ವಿಕೃತಿ ಹಾಗೂ 8 ಮತ್ತು 10 ನೇ ಪ್ರತಿವಾದಿಗಳ ಜಂಟಿ ಹೇಳಿಕೆಗಳ ದೃಢೀಕೃತ ನಕಲುಗಳನ್ನು ನೋಡುತ್ತಿದ್ದು, ಅವುಗಳನ್ನು ಒಪ್ಪಿಕೊಂಡು ಒಟ್ಟಾಗಿ **ನಿಡಿ-43 ಎಂದು ಗುರುತಿಸಲಾಯಿತು**. ನಾನು ದಿನಾಂಕಃ 03-12-2017 ರಂದು ದೂರನ್ನು ಸಲ್ಲಿಸಿದ್ದು, ಸದರಿ ದೂರು, ಪೋಲಿಸ್ ಸ್ವಿಕೃತಿಗಳ ದೃಢೀಕೃತ ನಕಲುಗಳನ್ನು ನೋಡುತ್ತಿದ್ದು, ಅವುಗಳನ್ನು ಒಪ್ಪಿಕೊಂಡು ಒಟ್ಟಾಗಿ **ನಿಡಿ-44 ಎಂದು ಗುರುತಿಸಲಾಯಿತು**. 8 ನೇ ಪ್ರತಿವಾದಿ ದಿನಾಂಕಃ 03-12-2017 ರಂದು ನನ್ನ ವಿರುದ್ಧ ದೂರನ್ನು ಸಲ್ಲಿಸಿದ್ದು, ಸದರಿ ದೂರು, ಪೋಲಿಸ್ ಸ್ವಿಕೃತಿಗಳ ದೃಢೀಕೃತ ನಕಲುಗಳನ್ನು ನೋಡುತ್ತಿದ್ದು, ಅವುಗಳನ್ನು ಒಪ್ಪಿಕೊಂಡು ಒಟ್ಟಾಗಿ **ನಿಡಿ-45 ಎಂದು ಗುರುತಿಸಲಾಯಿತು**. ವೆಂಕಟೇಶ್ ಎಂದರೆ 8 ನೇ ಪ್ರತಿವಾದಿಯ ಅಳಿಯ. ಅವರು ಪೋಲಿಸರಿಗೆ ನೀಡಿದ ಹೇಳಿಕೆಯ ದೃಢೀಕೃತ ನಕಲನ್ನು ನೋಡುತ್ತಿದ್ದು, ಅದನ್ನು ಒಪ್ಪಿಕೊಂಡು ಮೇರೆಗೆ **ನಿಡಿ-46 ಎಂದು ಗುರುತಿಸಲಾಯಿತು**. ನಾನು ನಮ್ಮ ತಂದೆಯ ಕೃಷಿ ಪಾಸ ಪುಸ್ತಕವನ್ನು ನೋಡಿ ಒಪ್ಪಿಕೊಂಡ ಮೇರೆಗೆ **ನಿಡಿ-47 ಎಂದು ಗುರುತಿಸಲಾಯಿತು**.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ ಪಾಟೀ ಸವಾಲನ್ನು ಮುಂದೂಡಿತು).

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿರುತ್ತಾರೆ,**

**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**